ಎಂ.ಎ. ಕುಮಾರ್, ಬೆಂಗಳೂರು

ಮಾತು ಬಾರದವನು ಅಪ್ಸರೆಯಂತಹ ಸುಂದರಿಯನ್ನು ಕಂಡಾಗ...?



ಕಣ್ಣುಗಳು ನಾಲಿಗೆಯ ಅಪ್ಪನಂತೆ ಮಾತನಾಡುತ್ತವೆ.

ನಾರಾಯಣ ಯಾಜಿ, ಶಿರಾಲಿ

‘ಕರುಣಾಕರ’ ಸಂಕಟದಲ್ಲಿಯೂ ಕೈಹಿಡಿದು ಎತ್ತುತ್ತಿಲ್ಲ. ಆತ ಇರುವುದೇ ಸುಳ್ಳು. ನೀವೇನಂತೀರಿ?

ಅವನಿಲ್ಲವೆಂದೇ ದೃಢವಾಗಿ ನಂಬಿ ಸ್ವಾವಲಂಬನೆ ಬೆಳೆಸಿಕೊಳ್ಳಿ. ಸೆಲ್ಫ್ ಹೆಲ್ಪು ಈಸ್ ದ ಬೆಸ್ಟ್ ಹೆಲ್ಪು.

ಗೀತಾ ಸಂತೋಷ, ಪಿರಿಯಾಪಟ್ಟಣ

ದೇವಾಲಯಕ್ಕೊಂದು ಟ್ಯೂಬ್‌ಲೈಟ್ ನೀಡಿ ಅದರ ಮೇಲೂ ಹೆಸರು ಬರೆಸಿಕೊಳ್ಳುವರಲ್ಲಾ...?

ಯಾರದೋ ಬೆಳಕಲ್ಲಿ ತಮ್ಮ ಹೆಸರ ಮೆರೆಸುವವರಿಗಿಂತ ತಮ್ಮದೇ ಬೆಳಕಲ್ಲಿ ಹೆಸರು ಬರೆಸಿಕೊಳ್ಳುವವರು ವಾಸಿ.

ನಾಜ್ಯೋತಿ, ಹೂವಿನಹಡಗಲಿ

ಪ್ಲಾಸ್ಟಿಕ್ ನಿಷೇಧಿಸಿದಂತೆ ಲಿಪ್‌ಸ್ಟಿಕ್ ನಿಷೇಧಿಸಿದರೆ ಏನಾಗಬಹುದು?



ತುಟಿಯಾಕಾರದ ಫ್ಲೋರಸೆಂಟ್ ಸ್ಟ್ರಿಪ್ ಸ್ಟಿಕರ್‌ಗಳು ಬಳಕೆಗೆ ಬರಬಹುದು.

ಎನ್. ವೈದೇಹಿ ಶೇಖರ್, ಮೈಸೂರು

ಮುಳುಗುತ್ತಿರುವ ಸಂಸಾರ ಮತ್ತು ಹಡಗನ್ನು ತಡೆಹಿಡಿಯಲು ಸಾಧ್ಯವೆ?

ಮೊದಲೇ ತಳಸ್ಪರ್ಶಿ ಅಧ್ಯಯನ ಮಾಡಿದ್ದರೆ ಸಾಧ್ಯ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ದೃಶ್ಯಮಾಧ್ಯಮದಲ್ಲಿ ಜಾಹೀರಾತು ನಿಷೇಧಿಸುವ ಕಾನೂನು ತಂದರೆ?

ಆ ಕಾನೂನು ನಿಷೇಧವಾಗುವಂತೆ ಮಾಧ್ಯಮಗಳು ನೋಡಿಕೊಳ್ಳುತ್ತವೆ.

ರತ್ನಾ ಅಶೋಕ ಗೊರವರ, ಧಾರವಾಡ

ಹೊರಟು ನಿಂತವರು ‘ನಾನು ಬರಲಾ...’ ಅಂತಾರಲ್ಲಾ?

ಪ್ರಸ್ಥಾನಕ್ಕೆ ಮುಂಚೆ ಸ್ಥಾನ ಭದ್ರ ಮಾಡಿಕೊಳ್ಳುವ ಜಾಣತನವದು.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಆಲ್ಜೀಬ್ರಾವನ್ನು ಕೋಬ್ರಾಗೆ ಹೋಲಿಸುವುದೇಕೆ?

ಎರಡೂ ಎದುರಾದಾಗ ತಲೆ ಕೆಟ್ಟು ಗೊಬ್ರಾ ಆಗುವುದರಿಂದ.

ವಿ. ಹೇಮಂತ್‌ಕುಮಾರ್, ಬೆಂಗಳೂರು

ಬಾಳ ಸಂಗಾತಿ ಜೀವಮಾನದ ಗೆಳತಿ ಅಲ್ಲವೇ ರಾಮ್‌ಜೀ?

ನಿಜ. ಹಲವೊಮ್ಮೆ ಜೀವ ತಿನ್ನುವ, ಕೆಲವೊಮ್ಮೆ ಮಾನ ಉಳಿಸುವ ಗೆಳತಿ.

ಚೆನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ

ದಾನ ಕೊಟ್ಟದ್ದನ್ನ ಮರೀಬೇಕು. ಸಾಲ ಕೊಟ್ಟದ್ದನ್ನ ಬರೀಬೇಕು. ಹೌದಾ?

bury ಬೇಕು ಎಂದಿತಂತೆ ‘ಮನ್ನಾ’ ಪಡೆ.

ಪಿ.ಜೆ. ರಾಘವೇಂದ್ರ, ಮೈಸೂರು

ಜೋಡಿ ನಾಯಕರನ್ನು ಜೋಡೆತ್ತು ಎನ್ನುವುದಾದರೆ ಜೋಡಿ ನಾಯಕಿಯರನ್ನು?

ಹುಷಾರ್! ಏನಾದರೂ ಅಂದರೆ ‘ಜೋಡೆತ್ತು’ವ ಸಾಧ್ಯತೆ ಇರುತ್ತದೆ.

ರಮೇಶ್. ಹನುಮನಾಳು

ನಾಮಫಲಕ ಕೆತ್ತುವವರು ತಮ್ಮ ಮನೆಗೇ ನಾಮಫಲಕ ಹಾಕಿಲ್ಲವೇಕೆ?

ತಮ್ಮ ಹೆಸರನ್ನು ಕೆಡಿಸಿಕೊಂಡಿದ್ದಾರಂತೆ.

ಮೋಹನರಾಜು ಎಸ್.ಎ. ಶಂಕರಘಟ್ಟ

ತಪೋಭಂಗ ಮಾಡಿದ ಮೇನಕೆಗೆ ಶಾಕುಂತಲೆ; ಮೈತ್ರಿ ಭಂಗ ಮಾಡಿದವರಿಗೆ?

ಕುಂತಲ್ಲೇ ಶಾಕ್!

ಕೆ.ಪಿ. ರಾಮುಗುಂಡಿ, ಬೈಲಹೊಂಗಲ

ಅವಮಾನ ಮತ್ತು ಅನುಮಾನ ಬೀರುವ ಪರಿಣಾಮಗಳೇನು?

ನುಗ್ಗುವವನಿಗೆ ರೋಷ; ಕುಗ್ಗುವವನಿಗೆ ಪಾಶ.

## ಬಹುಮಾನಿತ ಪ್ರಶ್ನೆ

ಅಮರಯ್ಯಾ ಪತ್ರಿಮಠ, ಸುರಪುರ

ಕ್ರೂರ ಮೃತ್ಯುವಿಗೂ ನಗು ಬರುವುದು ಯಾವಾಗ?

‘ಇನ್ನೊಂದ್ಸರ್ತಿ ಆತ್ಮಹತ್ಯೆ ಮಾಡ್ಕೊಳ್ಳಕ್ಕೆ ಟ್ರೈ ಮಾಡಿದರೆ ಸಾಯಿಸ್ಬಿಡ್ತೀನಿ ನೋಡು’ ಎನ್ನುವುದನ್ನು ಕೇಳಿದಾಗ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಕನ್ನಡ ಸೀರಿಯಲ್‌ಗಳಿಗೂ, ಕೃಷ್ಣ ದ್ರೌಪದಿಗೆ ನೀಡಿದ ಸೀರೆಗಳಿಗೂ ವ್ಯತ್ಯಾಸವೇನು?

ಆ ಸೀರೆಗಳು ಸೆಳೆದರೂ ಹರಿಯದಷ್ಟು ಗಟ್ಟಿ; ಈ ಸೀರಿಯಲ್‌ಗಳು ಎಳೆದೆಳೆದು ಜಾಳುಜಾಳು.

ಕೆ.ವಿ. ಗೋವಿಂದಾಚಾರಿ, ಮೈಸೂರು

ಮದ್ದಿನ (ಔಷಧಿ) ಅಂಗಡಿಗಳು ಮತ್ತು ಮದ್ಯದ ಅಂಗಡಿಗಳು ಅಕ್ಕಪಕ್ಕದಲ್ಲೇ ಇರಲು ಕಾರಣ?

ಅಪ್‌ಸೆಟ್ ಆದವರು ಸೆಟಪ್ ಆಗಲು ನೆರವಾಗಲು.

ವ. ಉಮೇಶ ಕಾರಂತ, ಮಂಗಳೂರು

ಗಾಂಧೀಗೇಕೆ ಕನ್ನಡಕ?



ವಿಶಾಲ ದೃಷ್ಟಿಗಾಗಿ!

ರತ್ನಾ ರಾಜ್‌ಕುಮಾರ್, ಹಾಸನ

ನಾನೊಬ್ಬಳು ಪ್ರಬುದ್ಧ, ಜನಾನುರಾಗಿ ರಾಜಕಾರಣಿಯಾಗಿದ್ದಿದ್ದರೆ?

ಅಂತಹ ವಿರುದ್ಧ ಗುಣಗಳಿರುವ ನಿಮ್ಮದು ಸ್ಪ್ಲಿಟ್ ಪರ್ಸನಾಲಿಟಿ ಎನ್ನುತ್ತಿದ್ದರು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

‘ರಾಮಕೃಷ್ಣ’ ಎನ್ನುವ ಹೆಸರಿನವರು ರಾಮನಂತೆ ಇರುತ್ತಾರೋ, ಕೃಷ್ಣನಂತೆ ಇರುತ್ತಾರೋ ರಾಮ್?

ಹೆಂಡತಿ ಸೀತೆಯಂತಿದ್ದರೆ ಕೃಷ್ಣನಾಟ ಆಡುತ್ತಾರೆ; ದ್ರೌಪದಿಯಾಗುತ್ತೇನೆಂದು ಹೆದರಿಸಿದರೆ ರಾಮನಾಗುತ್ತಾರೆ.

■ ರಾಮ್